ನೂತನ ಯೋಜನೆಗಳು
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ (13)

ಶ್ರೀ ನರೇಂದ್ರ ಆರ್. (ಹನೂರು)

ಅ) 2010–11 ನೇ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಗೆ ಆಯವ್ಯಯದಲ್ಲಿ ಘೋಷಿಸಿದ್ದ ಹೊಸ ಯೋಜನೆಗಳು ಯಾವುವು; ಅವುಗಳಿಗೆ ಒದಗಿಸಿರುವ ಅನುದಾನವೆಷ್ಟು; ಎಷ್ಟು ಬಿಡುಗಡೆ ಮಾಡಲಾಗಿದೆ; ಎಷ್ಟು ವೆಚ್ಚವಾಗಿದೆ; ಫಲಾನುಭವಿಗಳೆಷ್ಟು (ವರ್ಷವಾರು ವಿವರ ಒದಗಿಸುವುದು)

ಆ) 2010–11 ನೇ ಸಾಲಿನಿಂದ ಆಯವ್ಯಯದಲ್ಲಿ ಘೋಷಿಸಿರುವ ಉನ್ನತ ಶಿಕ್ಷಣ ಇಲಾಖೆಯ ಯೋಜನೆ ಹಾಗೂ ಯೋಜನೇತರ ಅನುದಾನವೆಷ್ಟು; ಎಷ್ಟು ಬಿಡುಗಡೆ ಮಾಡಲಾಗಿದೆ; ಎಷ್ಟು ವೆಚ್ಚವಾಗಿದೆ?

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) 2010–11 ರಿಂದ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಅಂಶಗಳಿಗೆ ತೆಗೆದುಕೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧಗಳಲ್ಲಿ ಲಗತ್ತಿಸಿದೆ.

ಆ) ಅನುಬಂಧ–ಬ ದಲ್ಲಿ ಲಗತ್ತಿಸಿದೆ.

ಅಪೌಷ್ಟಿಕತೆ ನಿವಾರಣೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ (22)

ಶ್ರೀ ರವಿಸುಬ್ರಮಣ್ಯ ಎಲ್.ಎ. (ಬಸವನಗುಡಿ)

ಅ) ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ಲಿಂಗವಾರು ವಿವರ ನೀಡುವುದು)

ಆ) ಸರ್ಕಾರದ ವತಿಯಿಂದ ಮಕ್ಕಳಿಗೆ ಪೂರೈಕೆಯಾಗುತ್ತಿರುವ ಪೌಷ್ಟಿಕ ಆಹಾರದಲ್ಲಿರುವ ಪೋಷಕಾಂಶಗಳು ಯಾವುವು ಹಾಗೂ ಅವುಗಳ

ಪ್ರಮಾಣವೆಷ್ಟು (per100gm) ಈ ಆಹಾರದ ಗುಣಮಟ್ಟವನ್ನು CFTRI ನಂತಹ ಸಂಸ್ಥೆಯಿಂದ ಖಾತರಿ ಪಡಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಿಸಲು ಸರ್ಕಾರವು ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳೇನು (ವಿವರ ನೀಡುವುದು)?

ಶ್ರೀ ಕಳಕಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ರಾಜ್ಯದಲ್ಲಿ ಡಿಸೆಂಬರ್ 2012ರ ಅಂತ್ಯಕ್ಕೆ 58648 ತೀವ್ರ ಅಪೌಷ್ಟಿಕ ಮಕ್ಕಳಿರುತ್ತಾರೆ. ಜಿಲ್ಲಾವಾರು ಹಾಗೂ ಲಿಂಗವಾರು ವಿವರವನ್ನು ಅನುಬಂಧ–1 ರಲ್ಲಿ ನೀಡಿದೆ.

ಆ) ಸರ್ಕಾರದ ವತಿಯಿಂದ ಅಂಗನವಾಡಿ ಕೇಂದ್ರಗಳಿಗೆ ಪೂರೈಕೆಯಾಗುತ್ತಿರುವ ಆಹಾರದಲ್ಲಿ 06 ತಿಂಗಳಿಂದ 6 ವರ್ಷದ ಪ್ರತಿ ಮಗುವಿಗೆ 12 ರಿಂದ 15 ಗ್ರಾಂ. ಪ್ರೋಟೀನ್ 350 ರಿಂದ 500 ಕ್ಯಾಲೋರಿ ಹಾಗೂ ಮೈಕ್ರೋನ್ಯೂಟ್ರಿಯಟ್ಸ್ ಒಳಗೊಂಡ ಆಹಾರವನ್ನು ನೀಡಲಾಗುತ್ತಿದೆ. ಪ್ರಸ್ತುತ ಆಹಾರದ ಗುಣಮಟ್ಟವನ್ನು CFTRI ರಂತಹ ಕೇಂದ್ರ ಸರ್ಕಾರದ ಸಂಸ್ಥೆಗಳಾದ ರಕ್ಷಣಾ ಆಹಾರ ಸಂಶೋಧನಾ ಕೇಂದ್ರ, ಮೈಸೂರು ಹಾಗೂ ಆಹಾರ ಮತ್ತು ಪೌಷ್ಟಿಕ ಆಹಾರ ಮಂಡಳಿ, ಚೆನ್ನೈ ಇವರ ಮೂಲಕ ಮಾಡಿಸಲಾಗುತ್ತಿದೆ.

ಇ) 1. ಅತೀ ಕಡಿಮೆ ತೂಕದ ಮಕ್ಕಳಿಗೆ ಪ್ರತಿ ದಿನ ತಲಾ ರೂ. 6.90/– ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರದಲ್ಲಿ ನೀಡಲಾಗುತ್ತಿದೆ.

2. ಅತೀ ಕಡಿಮೆ ತೂಕದ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ಪ್ರತಿ ಮಗುವಿಗೆ ಪ್ರತಿ ವರ್ಷಕ್ಕೆ ರೂ. 750/– ಗಳನ್ನು ಮಗುವಿನ ಚಿಕಿತ್ಸೆ ಹಾಗೂ ಥೆರಪೆಟಿಕ್ ಆಹಾರಕ್ಕಾಗಿ ನೀಡಲಾಗುತ್ತಿದೆ. ವೈದ್ಯರು ನೀಡುವ ಚಿಕಿತ್ಸಾ ಚೀಟಿಯಂತೆ ಔಷಧಿಗಳನ್ನು ಖರೀದಿಸಲು ಮಕ್ಕಳ ಪಾಲಕರಿಗೆ ಈ ಮೊತ್ತವನ್ನು ನೀಡಲಾಗುತ್ತಿದೆ.

3. ಬಾಲಸಂಜೀವಿನಿ ಯೋಜನೆಯಡಿ ರಾಜ್ಯದ 16 ಆಸ್ಪತ್ರೆಗಳ ಮೂಲಕ ಗುರುತಿಸಿರುವ 18 ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. 3ನೇ ಹಂತದ ಚಿಕಿತ್ಸೆಗೆ ಅವಶ್ಯವಿರುವ ಮಕ್ಕಳಿಗೆ ಗರಿಷ್ಟ ರೂ. 35000/– ಹಾಗೂ ನವಜಾತ ಶಿಶುವಿನ ಆರೈಕೆ ಮತ್ತು ಚಿಕಿತ್ಸೆಗೆ ರೂ. 50000/–ಗಳನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ.

4 ಅಪೌಷ್ಟಿಕ ಮಕ್ಕಳಿಗೆ ತಜ್ಞ ವೈದ್ಯರಿಂದ 3 ಬಾರಿ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲಾಗಿದೆ.

5.ಈಗ ನೀಡುತ್ತಿರುವ ಆಹಾರದ ಜೊತೆಗೆ ಮಾರ್ಚ್ 2012 ರಿಂದ ಉಚಿತವಾಗಿ ವಾರದಲ್ಲಿ 4 ದಿನ ಬೇಯಿಸಿದ ಮೊಟ್ಟೆ ಮತ್ತು 2 ದಿನ 200 ಎಂ.ಎಲ್. ಹಾಲನ್ನು ನೀಡಲಾಗುತ್ತಿದೆ.

6. ಮಕ್ಕಳ ತಾಯಂದಿರಿಗೆ ನಿಯಮಿತವಾಗಿ ಆರೋಗ್ಯ ಮತ್ತು ಪೌಷ್ಟಿಕತೆಯ ಬಗ್ಗೆ ತಿಳುವಳಿಕೆ ಹಾಗೂ ಪ್ರಾತ್ಯಕ್ಷತೆ ನೀಡುವುದು. ಅವರಲ್ಲಿ ಮಕ್ಕಳ ಪೋಷಣೆ, ಸ್ವಚ್ಚತೆ ಹಾಗೂ ಮನೆಯಲ್ಲೇ ಪೌಷ್ಟಿಕ ಆಹಾರವನ್ನು ನೀಡುವುದರ ಬಗ್ಗೆ ತಿಳುವಳಿಕೆ ಮಟ್ಟವನ್ನು ಹೆಚ್ಚಿಸಲು ಆರೋಗ್ಯ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪರಸ್ಪರ ಸಹಕಾರದೊಂದಿಗೆ ಕಾರ್ಯನಿರ್ವಹಿಸಲು ಕ್ರಮ ವಹಿಸಲಾಗಿದೆ.

7. ಅಂಗನವಾಡಿ ಕಾರ್ಯಕರ್ತೆಯರ ತಾಯಂದಿರ ಸಭೆಗಳಲ್ಲಿ ಹಾಗೂ ಪೌಷ್ಟಿಕ ಆಹಾರ ಶಿಬಿರಗಳಲ್ಲಿ ಆರೋಗ್ಯ ಮತ್ತು ಪೌಷ್ಟಿಕ ಆಹಾರದ ಬಗ್ಗೆ ಮಹಿಳೆಯರಿಗೆ ಅರಿವು ನೀಡುತ್ತಿದ್ದಾರೆ. ಇದಕ್ಕಾಗಿ 48 ವಿಷಯಗಳನ್ನೊಳಗೊಂಡ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಕೈಪಿಡಿ ಹಾಗೂ FlipChart ಗಳನ್ನು ತಯಾರಿಸಿ ಅಂಗನವಾಡಿ ಕಾರ್ಯಕರ್ತೆಯರಿಗೆ ಒದಗಿಸಲಾಗಿದೆ.

ಅನುಬಂಧ–1

ಕ್ರ ಸಂ.	ಜೆಲ್ಲೆಯ ಹೆಸರು	ತೀವ್ರ ಅಪೌಷ್ಟಿಕ ಮಕ್ಕಳ ಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
1	ಬಾಗಲಕೋಟೆ	971	1217	2188
2	ಬೆಂಗಳೂರು (ನ)	739	877	1616
3	ಬೆಂಗಳೂರು (ಗ್ರಾ)	224	276	500
4	ಬೆಳಗಾಂ	2856	3648	6504
5	ಬಳ್ಳಾರಿ	1963	2572	4535
6	ಬೀದರ್	495	586	1081
7	ಬಿಜಾಪುರ	1161	1453	2614
8	ಚಾಮರಾಜನಗರ	329	480	809
9	ಚಿಕ್ಕಬಳ್ಳಾಪುರ	408	518	926
10	ಚಿಕ್ಕಮಗಳೂರು	333	429	762
11	ಚಿತ್ರದುರ್ಗ	1018	1243	2261
12	ದಕ್ಷಿಣ ಕನ್ನಡ	339	347	686
13	ದಾವಣಗೆರೆ	877	1181	2058
14	ಧಾರವಾಡ	1349	1774	3123
15	ಗದಗ	920	1325	2245
16	ಗುಲ್ಬರ್ಗ	1856	2485	4341
17	ಯದಗಿರ್	762	1034	1796
18	ಹಾಸನ	191	206	397
19	ಹಾವೇರಿ	1173	1478	2651
20	ಕೊಡಗು	152	219	371
21	ಕೋಲಾರ	303	388	691
22	ಕೊಪ್ಪಳ	1749	2257	4006
23	ಮಂಡ್ಯ	336	427	763

24	ಮೈಸೂರು	682	828	1510
25	ರಾಮನಗರ	247	279	526
26	ರಾಯಚೂರು	2311	2832	5143
27	ಶಿವಮೊಗ್ಗ	702	814	1516
28	ತುಮಕೂರು	607	781	1388
29	ಉಡುಪಿ	240	312	552
30	ಉತ್ತರ ಕನ್ನಡ	469	620	1089
	ಒಟ್ಟು	**25762**	**32886**	**58648**

ಅಂಗನವಾಡಿಗಳಿಗೆ ಮೂಲಭೂತ ಸೌಕರ್ಯ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 12(35)

ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ರಾಜ್ಯದಲ್ಲಿರುವ ಒಟ್ಟು ಅಂಗನವಾಡಿ ಸಂಖ್ಯೆ ಎಷ್ಟು; ಆ ಪೈಕಿ ಸ್ವಂತ ಮತ್ತು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

ಆ) ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳನ್ನು ಉತ್ತಮ ಪರಿಸರದಲ್ಲಿ ಬೆಳೆಸಬೇಕೆಂಬ ನಿಯಮಗಳಿದ್ದರೂ ಆ ಕುರಿತಾದ ಕ್ರಮಗಳನ್ನು ಅನುಷ್ಠಾನ ಮಾಡದೇ ಇರಲು ಕಾರಣಗಳೇನು: ಕಳೆದ ಎರಡು ವರ್ಷಗಳಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿಗೆ ಸರ್ಕಾರ ಮಂಜೂರಾತಿ ನೀಡಿದೆ.

ಇ) ಅಪೌಷ್ಟಿಕತೆಯ ನಿವಾರಣೆಗಾಗಿ ಸುಸಜ್ಜಿತ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಳಕಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ)ಒಟ್ಟು ಮಂಜೂರಾಗಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ –64518

ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳು – 64513

ಸ್ವಂತ ಕಟ್ಟಡವಿರುವ ಅಂಗನವಾಡಿ ಕೇಂದ್ರಗಳು – 37204